ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 71-75.**
**©*IIMRD*, Mysuru**

IIMRD JOURNALS

**www.iimrd.com**

# ವಚನ ಸಾಹಿತ್ಯದಲ್ಲಿ ಕೃಷಿ ಸಂಸ್ಕೃತಿ

**ಪ್ರವೀಣ್‌ಕುಮಾರ್. ಎಮ್. ಸಿ.***

*ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

***ಸಾರಾಂಶ: (Abstract)***

ಶರೀರ ಎಂತೆಂಬುವ ಹೊಲನ ಹಸನ ಮಾಡಿ ಪರತತ್ವ ಬೆಳೆಯನ್ನು ಬೆಳೆದುಕೊಂಡವರು ಶರಣರು. ಹಾಗೆಂದು ಅವರು ಕಾಯಕವನ್ನು ಮರೆತವರಲ್ಲ. ಕೆಲಸ–ಕಾರ್ಯ ಯಾವುದೇ ಇರಲಿ, ಅದನ್ನು ಚಿತ್ತಶುದ್ಧ ಕಾಯಕ ಭಾವದಿಂದ ನಿರ್ವಹಿಸಬೇಕೆನ್ನುವುದು ಅವರ ನಿಲುವಾಗಿತ್ತು. ಕುವೆಂಪು ಅವರು ಬಸವಣ್ಣನನ್ನು ಮಾನವ ಹೃದಯ ಕ್ಷೇತ್ರದ ದೇವ ಕೃಷಿಕ ಎಂದು ಸಂಭೋದಿಸಿದ್ದು ಗಮನಾರ್ಹ. ಎಲ್ಲ ವೃತ್ತಿಯಂತೆ ಕೃಷಿ ಕಾಯಕದಲ್ಲೂ ತೊಡಗಿಕೊಂಡ ಅನೇಕಾನೇಕ ಶಿವಶರಣರಿದ್ದರು. ಅವರಲ್ಲಿ ಪ್ರಮುಖರು ಮುದ್ದಣ್ಣ, ಏಲೇಶ ಕೇತಯ್ಯ, ಇಳಿಹಾಳ ಬೊಮ್ಮಯ್ಯ ಮುಂತಾದವರು. ಹೀಗೆ ಬೇಸಾಯ ಮಾಡಿಕೊಂಡು, ಅದರೊಂದಿಗೇ ಅನುಭಾವ ಸಿದ್ಧಿಯನ್ನು ಗಳಿಸಿದವರು.

***ಮುಖ್ಯಪದಗಳು: (Keywords)*** ವಚನ, ಸಾಹಿತ್ಯ, ಕೃಷಿ, ವಚನಕಾರರು, ಸಂಸ್ಕೃತಿ.

**ಪೀಠಿಕೆ**

ಭಾರತವು ಉನ್ನತ ಜಾನಪದ ಸಂಸ್ಕೃತಿ ಮತ್ತು ಪರಂಪರೆಗಳನ್ನು ಹೊಂದಿರುವ ಬಹುದೊಡ್ಡ ರಾಷ್ಟ್ರವಾಗದೆ. ಇಂತಹ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಕೃಷಿ ಸಂಸ್ಕೃತಿಯು ಕೂಡ ಒಂದಾಗಿದೆ. ಕೃಷಿಯಿಂದ ಬಂದ ಉತ್ಪನ್ನವನ್ನು ಜಂಗಮ ದಾಸೋಹಕ್ಕೆ ಬಳಸುತ್ತಿದ್ದರು. ಮುದ್ದಣ್ಣನ ಹುಟ್ಟೂರು ಜೋಳದಹಾಳ. ಇದು ಚೋಳದೇಶದ ಹಾಳೆಂಬ ಪುರದ ಪಾಠಾಂತರವೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಅಂತೂ ಜೋಳದ ಹಾಳದ ಈ ಭಕ್ತ ಹದಿನೆಂಟು ತರದ ಧಾನ್ಯಗಳನ್ನು ಬೆಳೆಯುತ್ತ ಉತ್ತಮ ಕೃಷಿ ಕಾರುಬಾರು ನಡೆಸುತ್ತಿದ್ದನೆಂದು ಹೇಳಲಾಗಿದೆ. ಇದು ಅಂದಿನ ಕೃಷಿ ಪರಿಸರದ ಬೆಳೆಗಳ ವೈವಿಧ್ಯತೆಯನ್ನೂ ಪ್ರಚುರಪಡಿಸುತ್ತದೆ.

ಒಕ್ಕಲಿಗ ಮುದ್ದಣ್ಣ ಹದಿನಾಲ್ಕು ಬೆಡಗಿನ ವಚನಗಳು ಹಾಗೂ ಹತ್ತು ಧಾರ್ಮಿಕ ವಚನಗಳು ರಚಿತವಾಗಿವೆ ಎಂದು ಹೇಳಲಾಗಿದ್ದರೂ ಇರುವರೆಗೆ ದೊರೆತ ಅವನ ವಚನಗಳು ಹನ್ನೆರಡು ಮಾತ್ರ. ಅಂಗವೆ ಭೂಮಿಯಾಗಿ, ಲಿಂಗವೆ ಬೆಳೆಯಾಗಿ, ವಿಶ್ವಾಸವೆಂಬ ಬತ್ತ ಒಲಿದು ಉಂಡು, ಸುಖಿಯಾಗಿರಬೇಕೆಂದ ಕಾಮಭೀಮ ಜೀವನದೊಡೆಯ. ಹೀಗೆ ಕೃಷಿ ಪರಿಸರದ ಪರಿಭಾಷೆಯಲ್ಲಿ ಜೀವ ಮೌಲ್ಯಗಳನ್ನು, ತತ್ವಾದರ್ಶಗಳನ್ನು, ಆಧ್ಯಾತ್ಮ ಸಾಧನೆಯನ್ನು ಹಂಬಲಿಸುವುದು, ಬೆಂಬಲಿಸುವುದು ಅವನ

ಕಾವ್ಯ ವಸ್ತು. ಸರಳವಾಗಿ, ಲಯಬದ್ಧವಾಗಿ ಕಾವ್ಯ ಕಟ್ಟುವುದು ಅವನ ಬರವಣಿಗೆಯ ಶೈಲಿ. ಮೇಲಿನದು ಗಾತ್ರದಲ್ಲಿ ಚಿಕ್ಕದಾದರೂ ಸುಂದರವಾದ ಕಾವ್ಯರಚನೆಯಾಗಿದೆ. ಹೀಗೆ ಸರಳವಾದರೂ ಆಳವಾದ ಅರ್ಥವನ್ನು ಹೊಮ್ಮಿಸುವಂತಹ ವಚನಗಳು ಆತನವು. ಇತರ ಶರಣರ ವಚನಗಳ ಹಾಗೆ ಒಕ್ಕಲಿಗ ಮುದ್ದಣ್ಣನ ವಚನಗಳ ಗಾತ್ರವಿದ್ದರೂ, ಒಂದು ವಚನ ಮಾತ್ರ ದೀರ್ಘವಾದದ್ದಿದೆ. ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು ಎಂಬ ಆ ವಚನ ನಲವತ್ತು ಸಾಲಿನಷ್ಟು ದೀರ್ಘವಾಗಿದೆ. ಸ್ವತಃ ಕೃಷಿಕನಾದ ಒಕ್ಕಲಿಗ ಮುದ್ದಣ್ಣ ಅಂಗವೇ ಭೂಮಿಯಾಗಿ ಲಿಂಗವೇ ಬೆಳೆಯಾಗಿ ಎಂದು ಹೇಳುವಲ್ಲಿ ಅಪಾರವಾದ ಶರಣ ಪ್ರಜ್ಞೆ ಎದ್ದು ಕಾಣುತ್ತಿದೆ. ಐಹಿಕ ಸಂಗತಿಗಳನ್ನು ಸೂಚಿಸುವ ಶಬ್ದಗಳಾದ ಅಂಗ ಭೂಮಿ, ಲಿಂಗ, ಬೆಳೆ, ಈ ರೀತಿಯ ಶಬ್ದಗಳು ನುಡಿಗಟ್ಟುಗಳಾಗಿ ಬಂದಾಗ ಪ್ರಾಪ್ತವಾಗುವ ಅರ್ಥ ಸಿರಿವಂತಿಕೆ ಶರಣರ ಮಹಾಘನವೆ ಆಗಿದೆ.

ಈ ವಚನವೂ ಸೇರಿದಂತೆ ಅವನ ಹಲವು ವಚನಗಳಲ್ಲಿ ಶರಣರು ಪ್ರತಿಪಾದಿಸಿದ ಲಿಂಗಾಂಗ ಸಾಮರಸ್ಯದ ಧ್ವನಿ ಎದ್ದು ಕಾಣುತ್ತಿದೆ. ವಿಶ್ವಾಸವೆಂಬ ಬತ್ತ ಒಲಿದು ಉಂಡು ಎನ್ನುವ ಮುದ್ದಣ್ಣನ ಸಾಲುಗಳಲ್ಲಿ ನೈತಿಕತೆಗೆ ನೀಡಬೇಕಾದ ಒತ್ತು ಕಾಣುತ್ತದೆ. ಕೃಷಿಕ ಪ್ರಕೃತಿಯಲ್ಲಿ ತೋರಬೇಕಾದ ವಿಶ್ವಾಸವನ್ನು ಆತ ಬೆಳೆದು ತಂದ ಭತ್ತದ ಫಸಲಿನೊಂದಿಗೆ ಜೋಡಿಸಿದ್ದಾನೆ. ರೈತನಾದವನು ಭೂಮಿಯನ್ನು ಉತ್ತಿ ಬಿತ್ತಿ ಬೆಳೆದು ಅಹರ್ನಿಶಿ ದುಡಿಯುತ್ತಾನೆ. ಆ ಶ್ರಮದ ಹೊರತಾಗಿಯೂ ಬೆಳೆದ ಫಸಲನ್ನು ಮನೆಗೆ ತರುವಲ್ಲಿ ಅವನು ಅನುಭವಿಸುವ ಆನಂದ ಅವರ್ಣನೀಯ, ಅನಿರ್ವಚನೀಯ. ಈ ಅನುಭವವನ್ನು ಇಂದಿನ ಎಷ್ಟು ರೈತರು ಪಡೆಯುತ್ತಿದ್ದಾರೆಂಬ ಪ್ರಶ್ನೆ ಒಂದು ಕಡೆಯಾದರೆ, ಬಾಹ್ಯ ಕೃಷಿಯಲ್ಲಿ ಸೋಲುತ್ತಿರುವ ರೈತನನ್ನು ಅಂತರಂಗದ ಕೃಷಿಯ ಕಡೆಗೆ ತರುವುದು ಹೇಗೆಂಬ ಸವಾಲು ಮತ್ತೊಂದೆಡೆಗಿದೆ. ಸಮಕಾಲೀನ ಕೃಷಿಕ್ಷೇತ್ರದ ಏಳು–ಬೀಳುಗಳಿಗೆ ವಚನ ಸಾಹಿತ್ಯದಲ್ಲಿ ಉತ್ತರ ಹುಡುಕಬೇಕಾಗಿಲ್ಲ. ಆದರೆ ಪ್ರಸ್ತುತ ಕೃಷಿ ಬದುಕನ್ನು ಸಮಚಿತ್ತದಿಂದ ಅರ್ಥ ಮಾಡಿಕೊಳ್ಳಲು ಒಕ್ಕಲಿಗ ಮುದ್ದಣ್ಣನ ಕೃಷಿ ಕಾಯಕದ ವಚನಜೀವಿಗಳ ಬದುಕು–ಬರಹ ಪ್ರೇರಣೆಯಾಗಬಲ್ಲುದು. ಏಕೆಂದರೆ ಅವರಿಗೆ ಬರಹಕ್ಕಿಂತ ಬದುಕು ಮುಖ್ಯವಾಗಿತ್ತು. ಬೋಧನೆಗಿಂತ ಆಚರಣೆ ಮಹತ್ವದ್ದಾಗಿತ್ತು. ಮುದ್ದಣ್ಣನ ಬದುಕಿದಂತೆ ಬರೆದವನಾಗಿದ್ದರಿಂದ ಅವನ ಚಿತ್ತ ವೃತ್ತಿ, ಪ್ರವೃತ್ತಿ, ಗುಣ ಸ್ವಭಾವಗಳ ಜೊತೆಗೆ ಚರಿತ್ರೆಯನ್ನು ಕಟ್ಟಲು ವಚನಗಳನ್ನೇ ಆಶ್ರಯಿಸಬೇಕಾಗಿದೆ. ಸ್ವಲ್ಪ ಮಟ್ಟಿಗೆ ಅಂದಿನ ಕೃಷಿ ಪರಿಸರದ ಚಿತ್ರಣವನ್ನು ಕೂಡ ಕೃಷಿ ಕಾಯಕದ ಇಂಥ ವಚನಕಾರರ ಅನೇಕ ರಚನೆಗಳ ಮುಖಾಂತರ ಕಂಡುಕೊಳ್ಳಬಹುದಾಗಿದೆ.

ಮುದ್ದಣ್ಣನು ಹೊಲದಲ್ಲಿ ಉಳುಮೆ ಮಾಡುವಾಗ ನೇಗಿಲ ಮೊನೆಗೆ ಲಿಂಗ ಹತ್ತಿತೆಂದೂ, ಅದನ್ನು ಭಕ್ತಿಯಿಂದ ಮೇಲಕ್ಕೆತ್ತಿ ಮನೆಗೆ ತಂದು ಶ್ರದ್ಧೆಯಿಂದ ಪೂಜೆ ಮಾಡಿದನೆಂದೂ, ಅದೇ ಅವನಿಗೆ ದೊರೆತ ಲಿಂಗ ದೀಕ್ಷೆಯೆಂದೂ ಹೇಳಲಾಗಿದೆ. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ನೀಡಲು ನಿರಾಕರಿಸಿ, ತದನಂತರ ಪ್ರಭುತ್ವದ ವಿರುದ್ಧ ಪ್ರತಿಭಟಿಸಿ, ಅದರ ಪರಿಣಾಮವಾಗಿ ಗಡಿಪಾರಾದನೆಂಬ ಸಂದರ್ಭವು ಅವನ ಬದುಕಿನ ಪ್ರಮುಖ ಘಟ್ಟವಾಗಿದೆ. ಶರಣನಿಗೆ ಸಂಗ್ರಹ ಪ್ರವೃತ್ತಿ ನಿಷಿದ್ಧ. ಅದಕ್ಕೆ ಬದ್ಧನಾಗಿದ್ದುಕೊಂಡು, ಬಂದಂತ ಹೆಚ್ಚಿನ ಆದಾಯವನ್ನು ಶರಣರ ದಾಸೋಹಕ್ಕೆ ವಿನಿಯೋಗಿಸುತ್ತೇನೆಯೇ ಹೊರತು, ನಿಗದಿಯಾಗಿದ್ದಕ್ಕಿಂತ ಹೆಚ್ಚಿನ ತೆರಿಗೆಯನ್ನು ನೀಡಲಾರೆ ಎಂಬುದು ಆತನ ನಿಲುವಾಗಿತ್ತು. ಇದು

ಪ್ರಭುತ್ವದ ವಿರುದ್ಧದ ರೈತ ಚಳುವಳಿಯ ಬೀಜಾಂಕುರವೇ ಸರಿ. ಆ ಕಾರಣದಿಂದ ಮುದ್ದಣ್ಣನನ್ನು ರೈತ ಚಳುವಳಿಯ ಹರಿಕಾರನೆಂದು ಹೇಳಬಹುದಾಗಿದೆ. ಕೃಷಿ ಪಾರಿಭಾಷಿಕ ಪದಗಳನ್ನು ಬಳಸಿಕೊಂಡು, ಆ ವ್ಯವಸ್ಥೆಯೊಳಗಿನ ಘಟನೆ – ಸನ್ನಿವೇಶಗಳನ್ನು ಕಾವ್ಯ ವಸ್ತುವನ್ನಾಗಿಸಿಕೊಂಡು ಆಧ್ಯಾತ್ಮ ಸಾಧನೆಯ ಮಾರ್ಗವನ್ನು ಶೋಧಿಸುವುದು ಅವನ ಬರವಣಿಗೆಯ ಮುಖ್ಯ ಲಕ್ಷಣ. ಆತ ಸ್ವತಃ ಬರೆದನೊ, ಲಿಪಿಕಾರರ ಮುಖಾಂತರ ಬರೆಯಿಸಿದನೋ, ಅಂತೂ ಆತನ ಅಪಾರ ಸೃಜನಶಕ್ತಿಯಿರುವ ವಚನಕಾರನಾಗಿದ್ದಾನೆ. "ಕಾಮಭೀಮ ಜೀವಧನದೊಡೆಯ" ಆತನ ವಚನಾಂಕಿತವಾಗಿದೆ.

'ವಿಶ್ವಾಸವೆಂಬ ಬತ್ತ ಒಲಿದು ಉಂಡು ಸುಖಿಯಾಗಿರಬೇಕೆಂದ' ಎನ್ನುವ ಸಾಲಿನಲ್ಲಿ ಬತ್ತ ಧಾನ್ಯದ ಹೆಸರನ್ನು ಗಮನಿಸಿ ಹೇಳುವುದಾದರೆ ಬೀದರ – ಬಸವಕಲ್ಯಾಣ ಭಾಗದಲ್ಲಿ ಆಗಿನಿಂದಲೇ ಭತ್ತ ಬೆಳೆಯುತ್ತಿದ್ದರೆಂಬುದು ಸ್ಪಷ್ಟ. ಅದು ಉತ್ತಮ ಮಳೆ ಬೀಳುವ ಅರೆಮಲೆನಾಡು ಪ್ರದೇಶವಾಗಿತ್ತೆಂಬುದಕ್ಕೂ ಇದು ಪುಷ್ಟಿ ನೀಡುತ್ತದೆ. ಅಷ್ಟೇ ಅಲ್ಲ ಆ ಭಾಗದಲ್ಲಿ ನೀರಾವರಿ ಮೂಲಗಳೂ ಇದ್ದಿರಬಹುದು. ಬಸವಕಲ್ಯಾಣದ ಹೊರವಲಯದದಲ್ಲಿರುವ ತ್ರಿಪುರಾಂತಕ ಕೆರೆ ಆ ಕಾಲದ್ದೇ ಆಗಿದೆ. "ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು, ಕ್ರಿಯೆಗೆ ಅರಿವು ಬೇಕೆಂಬಲ್ಲಿ ಉಭಯನರಿದು ಘಟಿಸಬೇಕು" ಎಂದು ಮುದ್ದಣ್ಣನು ತನ್ನ ಇನ್ನೊಂದು ವಚನದಲ್ಲಿ ಹೇಳಿದ್ದಾನೆ. ಇಂದಿಗೂ ಹರಿಹರ ಭಾಗದ ರೈತರು ತಮ್ಮಲ್ಲಿ ಸಂರಕ್ಷಿಸಿ ಇಟ್ಟುಕೊಂಡಿರುವ 'ರತ್ನಸಾಗರ' ಎಂಬ ಭತ್ತದ ತಳಿಯು ಮೂಲತಃ ಬೀದರ ಪ್ರದೇಶದ್ದೆಂದೂ, ಹನ್ನೆರಡನೇ ಶತಮಾನದ ಸಾಗುವಳಿಯಲ್ಲೆ ಅದು ಇತ್ತೆಂದೂ ಹೇಳುತ್ತಾರೆ.

ತೆರಿಗೆ ಕುರಿತಾದ ವ್ಯಾಜ್ಯವನ್ನು ವಸ್ತುವಾಗಿಟ್ಟುಕೊಂಡ ಆತನ ವಚನದಲ್ಲಿ ಗುತ್ತಿಗೆಕಾರಂಗೆ ಮತ್ತೆ ಕುಳವುಂಟೆ?' ಎಂಬ ಸಾಲು ಬರುತ್ತದೆ. ಆಗಿನ ಅರಸೊತ್ತಿಗೆಯ ಆಡಳಿತ ವ್ಯವಸ್ಥೆಯಲ್ಲಿ ರಾಜ ಮತ್ತು ರೈತನ ನಡುವೆ ತೆರಿಗೆ ಸಂಗ್ರಹಕ್ಕಾಗಿ ಗುತ್ತಿಗೆಕಾರರು ಇರುತ್ತಿದ್ದಿರಬೇಕು. ಮುದ್ದಣ್ಣನ ತೆರಿಗೆ ವಿಷಯದಲ್ಲಿ ಬಂಡೆದ್ದಿದ್ದು ಆ ಮಟ್ಟದ (ಅಂದರೆ ಮಧ್ಯಮ ಹಂತದ) ಆಡಳಿತಗಾರನ ವಿರುದ್ಧವೂ ಇರಬಹುದು. ಆದರೆ ಆತ ರಾಜನ ವಿರುದ್ಧವೇ ಪ್ರತಿಭಟಿಸಿದ ಎಂದು ತಿಳಿಯುವುದಾದರೆ, ಆತನು ನಾಯಕತ್ವ ಗುಣವುಳ್ಳ, ಅನುಕೂಲಸ್ಥ ಮತ್ತು ವಿವೇಕಿಯಾದ ರೈತನಿರಬೇಕು. ಅಂತೆಯೇ ಆತ ರೈತ ಪ್ರತಿನಿಧಿಯಾಗಿ ಅನುಭವ ಮಂಟಪದ ಕಲಾಪದಲ್ಲಿ ಭಾಗವನಿಸಲು ಸಾಧ್ಯವಾಗಿರಬಹುದೆಂದು ಭಾವಿಸಬಹುದಾಗಿದೆ. ಹೀಗೆ ಮಹಾಮನೆಯಲ್ಲಿ ಬಸವಣ್ಣನ ಸಾಲಿನಲ್ಲಿಯೇ ಮುದ್ದಣ್ಣ ಪರಿಚಯಿಸಲಾಗುತ್ತಿತ್ತೆಂಬುದು ಗಮನಾರ್ಹ ಸಂಗತಿ. ಹಾಗೆ ನೋಡಿದರೆ ಮಹಾಮನೆಯಲ್ಲಿನ ಪರೀಷೆಗೆ ಸಮಾನತೆಯೇ ಮೂಲಾಧಾರ. ಕೃಷಿ ಮಾಡಿ ಯೋಗ್ಯ ತೆರಿಗೆ ನೀಡುವುದು ತನ್ನ ಕರ್ತವ್ಯವಾದಂತೆ, ಪ್ರಭುತ್ವದ ದಮನಕಾರಿ ನಡೆಗೆ ಪ್ರತಿಭಟಿಸುವುದು ತನ್ನ ಹಕ್ಕು ಎಂದು ತಿಳಿದಿದ್ದ ಮುದ್ದಣ್ಣ ಅನುಭವಮಂಟಪದ ರೈತರ ಧ್ವನಿಯಾಗಿದ್ದಾನೆ. ಅಂದಿನ ಪ್ರಮುಖ ಉತ್ಪಾದಕ ವಲಯವಾದ ಕೃಷಿ ಕ್ಷೇತ್ರದಿಂದ ಬಂದ ಮುದ್ದಣ್ಣ ಹನ್ನೆರಡನೆ ಶತಮಾನದ ಪಾರ್ಲಿಮೆಂಟ್ ವ್ಯವಸ್ಥೆಯಲ್ಲಿನ ರೈತ ಪ್ರತಿನಿಧಿಯೂ ಆಗಿದ್ದಾನೆ, ಅಂತರಂಗ–ಬಹಿರಂಗದ ಕೃಷಿಯ ಸಾಧಕನೂ ಆಗಿದ್ದಾನೆ.

**ಕೃಷಿ ಮತ್ತು ದಾಸೋಹ**

ಶರಣರು ರೂಢಿಗೆ ತಂದೆ 'ದಾಸೋಹ; ಒಂದು ವಿಶಿಷ್ಟ ಪಾರಿಭಾಷಿಕ ಪದ. ಕೃಷಿಯಿಂದ ಬಂದ ಉತ್ಪನ್ನವನ್ನು ಜಂಗಮ ದಾಸೋಹಕ್ಕೆ ಬಳಸಬೇಕೆಂಬುದು ಅವರ ನಿಲುವಾಗಿತ್ತು. ಅದರಂತೆ ಅವರು

ಕಾಯಕಕ್ಕೆ ಎರಡು ಉದ್ದೇಶಗಳಿವೆ, ಒಂದು ಸಂಪಾದನೆ, ಇನ್ನೊಂದು ದಾಸೋಹ. ಅಂದ ಮೇಲೆ ದಾಸೋಹರಹಿತ ಕಾಯಕಕ್ಕೆ ಅಸ್ತಿತ್ವವಿಲ್ಲವೆಂದಾಯಿತು. ದುಡಿಮೆ ವ್ಯಕ್ತಿಗೆ ಕಡ್ಡಾಯ. ದುಡಿಮೆಯೇ ಕಾಯಕವೆನಿಸಿತು. ಆ ಕಾಯಕ ಬಿಟ್ಟಿಯಲ್ಲ ಉಪಕಾರವಲ್ಲ.

ನೇಮದ ಸಂಪಾದನೆಯನ್ನು ತರುವಂಥದು. ಆ ಸಂಪಾದನೆ ಕೇವಲ ಹೊಟ್ಟೆ ಹೊರೆದುಕೊಳ್ಳುವುದಕ್ಕಲ್ಲ. ಅದರ ನಿರ್ದಿಷ್ಟ ಭಾಗವನ್ನು ಪರರಿಗಾಗಿ ವಿನಿಯೋಗಿಸಲೇಬೇಕೆಂದು ಶರಣರು ತಮಗೆ ತಾವೇ ಕಟ್ಟಪ್ಪಣೆ ವಿಧಿಸಿಕೊಂಡಿದ್ದರು. ಇದೇ ದಾಸೋಹ. ಜಂಗಮ ದಾಸೋಹ ಶರಣ ಪರಂಪರೆಯಲ್ಲಿ ಒಂದು ಮೌಲ್ಯವೆನಿಸಿದೆ. ಆಧ್ಯಾತ್ಮದ ಸಿದ್ಧಿ ಪಡೆದುಕೊಂಡು ತನ್ನ ಸಿದ್ಧಿಯ ಫಲವನ್ನು ಭಕ್ತರಿಗೆ ವಿತರಿಸುತ್ತ ಭಕ್ತರಿಗೆ ನಿಜೈಕ್ಯದ ಮಾರ್ಗತೋರಿ ಸುತ್ತ ಯೋಗಿಯಂತೆ ಸಂಚರಿಸುವ ವ್ಯಕ್ತಿಯೇ ಜಂಗಮ. ಅಂದಿನ ಶರಣರಿಗೆ ಜಂಗಮ ದಾಸೋಹ ಅವರ ದಿನಚರಿಯ ಒಂದು ಭಾಗವಾಗಿತ್ತು. ದಾಸೋಹ 'ದಾನ'ವಲ್ಲ. ದಾನದಲ್ಲಿ ಅಹಂಕಾರವಿರುತ್ತದೆ.

ದಾನ ನೀಡುವ ಹಣ ವಸ್ತು ಯಾವ ಯಾವದೋ ಕ್ರಮದಲ್ಲಿ ಬಂದಿರುವಂಥದು. ಎಷ್ಟೋ ಸಲ ಶೋಷಣೆಗೆ ಕಾರಣವಾಗಿರುವಂಥದು. ದಾನ ನೀಡುವುದು, ದಾಸೋಹ ಅರ್ಪಿಸುವುದ್. ಸಕಲ ಪ್ರಕೃತಿ ಸಂಪತ್ತು ದೈವೀ ಕೃಪೆಯಿಂದ ಲಭ್ಯವಾಗಿರುವಾಗ ಅದನ್ನು ಮತ್ತೊಬ್ಬರಿಗೆ ದಾನ ನೀಡುವ ಅಧಿಕಾರ ಯಾರಿಗಿದೆ? ಹೀಗೆ ಶರಣರು ಪರಂಪರಾಗತ 'ದಾನ'ವನ್ನು ತಿರಸ್ಕರಿಸಿ ಅದರ ಬದಲಾಗಿ ದಾಸೋಹವನ್ನು ರೂಢಿಗೆ ತಂದರು. ಶರಣರು ದಾಸೋಹಕ್ಕೆ ನಿಷ್ಠುರವಾದ ನಿಯಮಗಳನ್ನು ಅಳವಡಿಸಿದ್ದರು.

***ಕಾಯಕವೆಂದು ಕಾಯುವ ಬಳಲಿಸದೆ***
***ತನುಕರಗದೆ ಮನನೋಯದೆ***
***ಕಾಡಿಬೇಡಿ ಮಾಡುವುದು ದಾಸೋಹವೇ?***

ಎಂದು ಶಿವಲೆಂಕ ಮಂಚಣ್ಣ ಪ್ರಶ್ನಿಸುತ್ತಾನೆ. ಭಕ್ತನು ಅಲ್ಲಿ ಇಲ್ಲಿ ಕಾಡಿಬೇಡಿ ತಂದ ಧನದಿಂದ ದಾಸೋಹ ಮಾಡಲಾಗದು. ಪರಿಶ್ರಮದಿಂದ ಗಳಿಸಿದ್ದು ಮಾತ್ರ ದಾಸೋಹಕ್ಕೆ ಸಲ್ಲುವಂಥದು. ದಾಸೋಹದಿಂದ ಧನ್ಯತೆ ಪಡೆಯುವ ಉತ್ಸಾಹಕ್ಕೆ ಶರಣರು ನಿಯಂತ್ರಣ ಒಡ್ಡಿದ್ದಾರೆ.

ದಾಸೋಹದ ನಿಯಮ ಭಕ್ತ ಕೃಷಿಕರಿಬ್ಬರಿಗೂ ಅನ್ವಯಿಸುವಂಥದು. ಭಕ್ತನು ಕಾಯಕದಿಂದ ಬಂದುದನ್ನು ಮಾತ್ರ ದಾಸೋಹ ಮಾಡಬೇಕಾದಂತೆ ಕಾಯಕನಿರತ ಜಂಗಮನು ಮಾತ್ರ ದಾಸೋಹ ಮಾಡಬೇಕಾದಂತೆ ಕಾಯಕನಿರತ ಜಂಗಮನು ಮಾತ್ರ ದಾಸೋಹ ಸ್ವೀಕರಿಸಲು ಅರ್ಹನಾಗಿದ್ದನು. ಜಂಗಮನಿಗೆ ಭಕ್ತರ ಮನೆಯ ದಾಸೋಹವೆಂಬುದು ಹೊಟ್ಟೆಹೊರೆದುಕೊಳ್ಳುವ ಉಪಜೀವನ ಕ್ರಮವಲ್ಲ. ಜಂಗಮನು ತನಗೆ ಸಮಾಜ ವಹಿಸಿಕೊಟ್ಟ ಕಾಯಕ ಮಾಡಿದಾಗಲೇ ಭಕ್ತರ ಮನೆಗೆ ದಾಸೋಹಕ್ಕೆ ಯೋಗ್ಯನೆನಿಸುತ್ತಾನೆ.

***ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು***
***ಕಾಯಕ ಸತ್ತು ಹಣ ಹೊನ್ನ ಬೇಡಿಹೆನೆಂಬುದು***
***ಕಷ್ಟವಲ್ಲದೆ ಸದ್‌ಭಕ್ತಂಗೆ***
***ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ***

ಎಂದು ಆಯ್ದಕ್ಕಿ ಮಾರಯ್ಯ ಹೇಳುತ್ತಾನೆ. ಅಂದಿನ ಗುರು–ಜಂಗಮರ ಸಮೂಹದಲ್ಲಿ ಮೈಗಳ್ಳರೂ ಇದ್ದಿರಬೇಕು. ಅವರು ಭಾವುಕ ಭಕ್ತರನ್ನು ಶೋಷಿಸುತ್ತಿರಬೇಕು. ಧನದ ಆಸೆಗಾಗಿ ಅನರ್ಹರಿಗೆ ಉಪದೇಶ ನೀಡುತ್ತಿದ್ದಿರಬೇಕು. ಆದ್ದರಿಂದಲೇ ಚೆನ್ನಬಸವಣ್ಣನು

***ತನು ಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವ ಗಳಿಸಿ***
***ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ***
***ಭಕ್ತನಾದೆನೆಂಬಂವನ ತೋರದಿರಯ್ಯಾ***
***ಅದೇಕೆಂದಡೆ***
***ಅವ ಪರಧನ ಚೋರಕ, ಅವ ಪಾಪಿ ಕೋಪಿ ಪರಿಭ್ರಷ್ಟ,***
***ಅವಂಗೆ ವಿಚಾರಿಸದೆ***
***ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ***
***ಅವನ ಕಾಯಕವ ವಿಚಾರಿಸದೆ ಅವನ ಮನೆಯ ಹೊಕ್ಕು***
***ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ***

ಹೀಗೆ ನಿಷ್ಠುರವಾಗಿ ಹೇಳಿದ್ದಾನೆ. ಸಮಾಜದಲ್ಲಿ ಕಾಯಕದ ಗೌರವವನ್ನು ಪ್ರತಿಪಾದಿಸುವ ಮತ್ತು ನೈತಿಕತೆಯನ್ನು ಪುಷ್ಟೀಕರಿಸುವ ಕಳಕಳಿ ಇಲ್ಲಿ ವ್ಯಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಲ್ಲೂರು ಈಶ್ವರನ್. (1997). *ಬಸವಣ್ಣ ಹಾಗೂ ಲಿಂಗಾಯತ ಧರ್ಮ.* ಪ್ರಿಯದರ್ಶಿನಿ ಪ್ರಕಾಶನ.
- ಹಿರೇಮಠ ಆರ್.ಸಿ. (ಸಂ.) (1965). ಚೆನ್ನಬಸವಣ್ಣನವರ ವಚನಗಳು. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ
- ಶ್ರೀನಿವಾಸಮೂರ್ತಿ, ಎಂ.ಆರ್. (1956). ವಚನಧರ್ಮಸಾರ. ಕನ್ನಡ ಗ್ರಂಥಮಾಲೆ, ಮೈ.ವಿ.ವಿ., ಮೈಸೂರು.
- ತಿಪ್ಪೇರುದ್ರಸ್ವಾಮಿ ಎಚ್. (1963). *ಶರಣರ ಅನುಭಾವ ಸಾಹಿತ್ಯ.* ಡಿ.ವಿ.ಕೆ. ಮೂರ್ತಿ.
- ವಿದ್ಯಾಶಂಕರ ಎಸ್. (ಸಂ.) (1993). *ವಚನ ಪರಿಭಾಷಾಕೋಶ.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.
- ವಿದ್ಯಾಶಂಕರ ಎಸ್. (ಸಂ.) (1998). ಹಲಗೆಯಾರ್ಯನ ಶೂನ್ಯಸಂಪಾದನೆ. ಸ್ನೇಹಾ ಪ್ರಿಂಟರ್ಸ್, ಬೆಂಗಳೂರು.
- ವಿಜಯಕುಮಾರ ಮಹಾನುಭಾವಿಗಳು. (2004). *ಅಕ್ಕಮಹಾದೇವಿಯವರ ವಚನ ವ್ಯಾಖ್ಯಾನ.* ಪ್ರಭು ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.